# ಸಿಡಿಲು ಬಡಿದೀತು, ಎಚ್ಚರ!



ಚಿತ್ರ: ಮಂಜುನಾಥ ಎಂ.ಎಸ್

■ ಡಾ. ಕರವೀರಪ್ರಭು ಕ್ಯಾಲಕೊಂಡ

ಮಳೆ ಆಗುವಾಗ ಅದರ ಜತೆಗೆ ಬರುವ ಸಿಡಿಲು, ಮಿಂಚು ಭಯ ಹುಟ್ಟಿಸುತ್ತದೆ. ಇದು ಜೀವಜಗತ್ತಿನ ವಿಸ್ಮಯಗಳಲ್ಲೊಂದು.

ಈ ವರ್ಷ ಮುಂಗಾರಿನ ಅಬ್ಬರ, ಆರ್ಭಟ ಹೆಚ್ಚು. ಸಿಡಿಲು ಬಡಿದು ಸತ್ತವರ ಸಂಖ್ಯೆಯೂ ಹೆಚ್ಚಿದೆ. ಸತ್ತ ದನಕರುಗಳು, ಕುರಿಗಳು, ಮೇಕೆಗಳು ಲೆಕ್ಕಕ್ಕಿಲ್ಲದಷ್ಟು. ಸಿಡಿಲು ಬಡಿದ ಸುದ್ದಿ ಇತ್ತೀಚೆಗೆ ದೃಶ್ಯಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ಸರ್ವೇಸಾಮಾನ್ಯವಾಗಿ ಬಿಟ್ಟಿದೆ. ಜನರಲ್ಲಿ ಭಯ, ಭೀತಿ ಹೆಚ್ಚಿಸಿದೆ.

ಸಿಡಿಲು, ಮಿಂಚಿನ ಕುರಿತು ವೈಜ್ಞಾನಿಕ ವಿಶ್ಲೇಷಣೆ ಹೊರಬೀಳುವ ಮೊದಲು ಜನರು ಹಲವಾರು ಕಟ್ಟು ಕಥೆಗಳನ್ನು ನಂಬಿದ್ದರು. ಕೆಲವರು ಮಿಂಚು ಒಬ್ಬ ಮಹಾಶಕ್ತಿಯುತ ದೇವರ ವಿಶೇಷ ಆಯುಧವೆಂದು ನಂಬಿದ್ದರು, ಹಲವರು ರಾಕ್ಷಸರಿಂದ ಮಾನವನನ್ನು ಕಾಪಾಡುವ ಅತಿಶಕ್ತಿ ದೇವರಾದ ಥಾರನ್ ಆಯುಧವಾದ ಸುತ್ತಿಗೆಯಿಂದ ಬಂದದ್ದು ಎಂದು ನಂಬಿದ್ದರು. ಆಫ್ರಿಕಾದಲ್ಲಿ ಮಿಂಚು ಹೊಡೆದ ಜಾಗ ಅಥವಾ ಜನರಿಗೆ ಶಾಪವಿದೆ ಎನ್ನುತ್ತಿದ್ದರು. ಅಮೆರಿಕ ಹಾಗೂ ಯುರೋಪ್‌ಗಳಲ್ಲಿ ಮಿಂಚನ್ನು ತಡೆಯಲು ಚರ್ಚ್ ಘಂಟೆಗಳನ್ನು ಹೊಡೆಯುತ್ತಿದ್ದರು. ಗ್ರೀಕರು ಹಾಗೂ ರೋಮನ್ನರು ಮಿಂಚು ಝೂಯಿಸ್ ಅಥವಾ ಬುಧ ದೇವರ ಅಸಮಾನ್ಯ ಆಯುಧ ಎಂದು ಭಾವಿಸಿದ್ದರು

ಮಿಂಚು, ಗುಡುಗು, ಸಿಡಿಲು ಒಟ್ಟಿಗೆ ಸಂಭವಿಸುತ್ತವೆ. ಮಿಂಚು ಮೊದಲು ಕಾಣಿಸಿ ಸ್ವಲ್ಪ ಸಮಯದ ನಂತರ ಗುಡುಗು ಸಿಡಿಲು ಕೇಳಿಸುತ್ತವೆ. ಇದಕ್ಕೆ ಕಾರಣ ಬೆಳಕಿನ ವೇಗ ಶಬ್ದದ ವೇಗಕ್ಕಿಂತ ಹೆಚ್ಚು ಇರುವುದು. ಬೆಳಕಿನ ವೇಗ ಸೆಕೆಂಡಿಗೆ 3 ಲಕ್ಷ ಕಿ.ಮೀ ಆದರೆ, ಶಬ್ದದ ವೇಗ ಸೆಕೆಂಡಿಗೆ 330 ಮೀ. ಇರುತ್ತದೆ. ಆದ್ದರಿಂದ ಮಿಂಚು ಕಂಡ ನಂತರ ಗುಡುಗು, ಸಿಡಿಲು ಕೇಳಿಸುತ್ತವೆ.

ಹೊಲ,ಗದ್ದೆಗಳಂತಹ ಬಯಲು ಪ್ರದೇಶಗಳಲ್ಲಿ ಕೆಲಸ ಮಾಡುವ ರೈತರು, ಕುರಿಕಾಯುವವರು, ದನಕಾಯುವವರಿಗೆ ಸಿಡಿಲು ಬಡಿಯುವುದು ಹೆಚ್ಚು. ಮನೆಯಲ್ಲಿದ್ದಾಗ ತೆರೆದ ಬಾಗಿಲು ಕಿಟಕಿಗಳ ಮೂಲಕ ಸಿಡಿಲು ಪ್ರವೇಶಿಸಬಹುದು.

## ಲಕ್ಷಣಗಳು:

ಸಿಡಿಲು ಬಡಿದಾಗ ವ್ಯಕ್ತಿ ಒಮ್ಮಿಂದೊಮ್ಮೆಲೆ ಬದಲಿ ಬಂದಂತಾಗಿ ಪ್ರಜ್ಞಾಹೀನವಾಗುವನು. ಹೃದಯ ಚಟುವಟಿಕೆ ಕೇಂದ್ರ, ಉಸಿರಾಟ ಕೇಂದ್ರಗಳು ಪಾರ್ಶ್ವ ಪೀಡಿತವಾಗುವ ಕಾರಣದಿಂದ ವ್ಯಕ್ತಿ ತಕ್ಷಣ ಸಾವನ್ನಪ್ಪಬಹುದು. ಇಲ್ಲವೆ ಸಿಡಿಲು ಬಡಿದಾಗ ಉಂಟಾಗುವ ಸುಟ್ಟಗಾಯಗಳಿಂದಾಗಿ, ಅವುಗಳ ನಂತರದ ಪರಿಣಾಮಗಳಿಂದಾಗಿ ಸಿಡಿಲು ಬಡಿದ ಕೆಲವು ದಿನಗಳು ಅಥವಾ ವಾರಗಳಲ್ಲಿ ಅಸು ನೀಗಬಹುದು ಅಪಾಯಕಾರಿ ಅಲ್ಲದ ಸಂದರ್ಭಗಳಲ್ಲಿ ಹಿಸ್ಟಿರಿಯಾ, ತಲೆನೋವು, ತಲೆಸುತ್ತು ಕಿವಿಯಲ್ಲಿ ಜಾಗಟೆ ಬಡೆದಂತಹ ಸದ್ದುಗಳ ಸುಳಿಯಲ್ಲಿ ಗಿರಕಿ ಹೊಡೆಯಬಹುದು. ದಿನಗಳೆದಂತೆ ಈ ಲಕ್ಷಣಗಳು ಮಾಯವಾಗಿ ಅಶಕ್ತತೆ ಅಪ್ಪಿಕೊಳ್ಳಬಹುದು. ತೀವ್ರ ಸ್ವರೂಪದ ಸಿಡಿಲು ಬಡಿತದಲ್ಲಿ ಕೆಂಗಣ್ಣು, ಕಾರ್ನಿಯಾ ಹೊಳಪು ಕಳೆದುಕೊಂಡು ಮಸಕು ಮಸಕಾಗಬಹುದು, ಕ್ಯಾಟರ್‍ಯಾಕ್ಟ್ ಕಾಣಿಸಬಹುದು. ದೃಷ್ಟಿಪಟಲದಲ್ಲಿ ರಕ್ತಸ್ರಾವವಾಗಬಹುದು ಅಥವಾ ದೃಷ್ಟಿಪಟಲ ಬೇರ್ಪಟ್ಟು ದೃಷ್ಟಿಮಾಂದ್ಯ ತಲೆದೋರಬಹುದು. ಕಿವುಡು ಕಂಗೆಡಿಸಬಹುದು. ಪಾರ್ಶ್ವವಾಯು ಪೀಡಿಸಬಹುದು. ನೆನಪುಗಳೆಲ್ಲ ಮಂಗಮಾಯವಾಗಬಹುದು!

ಸಿಡಿಲು ಬಡಿದಾಗ ವೈವಿಧ್ಯಮಯಗಳು ಕಾಣಿಸಿಕೊಳ್ಳುವವು ಚರ್ಮದಡಿಯಲ್ಲಿ ರಕ್ತ ಸ್ರಾವ, ರಕ್ತ ಮಜ್ಜುಗಟ್ಟುವಿಕೆ, ತೆರೆಚಿದ ಗಾಯದಂತಹ, ಮೈಮೆಲಿನ ಕೂದಲು ಸುಡುವುದು ಸಾಮಾನ್ಯ